# ಭಗವಂತನ ನಾಮಜಪ



✻ **ಭ**ಗವಂತನ ನಾಮಗುಣಕೀರ್ತನೆ ಮಾಡಿದ್ದೇ ಆದರೆ ದೇಹಕ್ಕೆ ಸಂಬಂಧಪಟ್ಟ ಪಾಪಗಳೆಲ್ಲಾ ಕಾಲಿಗೆ ಬುದ್ಧಿ ಹೇಳುತ್ತವೆ. ದೇಹವೆಂಬ ವೃಕ್ಷದಲ್ಲಿ ಪಾಪವೆಂಬ ಹಕ್ಕಿಗಳು ಕುಳಿತುಕೊಳ್ಳುತ್ತವೆ. ಭಗವಂತನ ನಾಮಗುಣ ಕೀರ್ತನೆ ಮಾಡುವುದೇ ಕೈಚಪ್ಪಾಳೆ ಹೊಡೆದ ಹಾಗೆ. ಕೈಚಪ್ಪಾಳೆ ಹಾಕಿದೊಡನೆಯೇ ಮರ ದಿಂದ ಎಲ್ಲಾ ಹಕ್ಕಿಗಳು ಓಡಿ ಹೋಗುವ ಹಾಗೆ, ಭಗವಂತನ ನಾಮಗುಣಕೀರ್ತನೆ ಮಾಡಿದೊಡನೆಯೇ ಎಲ್ಲಾ ಪಾಪಗಳೂ ಕಂಬಿ ಕೀಳುತ್ತವೆ.

✻ **ಭಕ್ತ :** ಮಹಾಶಯರೇ, ಕೇವಲ ನಾಮವೇ ಸಾಕು. ಕಲಿಯುಗದಲ್ಲಿ ನಾಮ ಮಾಹಾತ್ಮ್ಯ.

**ಶ್ರೀರಾಮಕೃಷ್ಣರು:** ಹೌದು. ನಾಮದಲ್ಲಿ ಒಳ್ಳೇ ಮಾಹಾತ್ಮ್ಯ ಇರುವುದೇನೋ ನಿಜ. ಆದರೆ ಅನುರಾಗವಿಲ್ಲದಿದ್ದರೆ ಏನು ದೊರೆಯುತ್ತದೆ? ಭಗವಂತನಿಗಾಗಿ ಪ್ರಾಣ ಸುಮ್ಮನೆ ವ್ಯಾಕುಲ ಪಡಬೇಕು. ನಾಮವನ್ನೇನೋ ಸುಮ್ಮನೆ ಉಚ್ಚರಿಸುತ್ತ ಕಾಮ ಕಾಂಚನಗಳಲ್ಲಿ ಮನಸ್ಸಿಟ್ಟದ್ದರೆ ಭಗವಂತನ ಸಾಕ್ಷಾತ್ಕಾರ ದೊರೆ ಯುವುದೆ? ಚೇಳು ಅಥವಾ ಜೇಡರಹುಳುಗಳ ಕಡಿತದ ನೋವು ಕೇವಲ ಮಂತ್ರದಿಂದಲೇ ಇಳಿದುಹೋಗುವುದಿಲ್ಲ. ಬೆರಣಿಯ ಹೊಗೆ ಕೊಡಬೇಕು.

✻ ಭಗವನ್ನಾಮೋಚ್ಚಾರಣೆಯಿಂದ ಮನುಷ್ಯ ಒಮ್ಮೆ ಶುದ್ಧನೇನೋ ಆದ ಅಂತ ಇಟ್ಟುಕೊ. ಆದರೆ ಮತ್ತೆ ಆತ ಅನೇಕ ಪಾಪಕಾರ್ಯಗಳಲ್ಲಿ ತೊಡಗಿಬಿಡುತ್ತಾನೆ. ಆತನದು ದುರ್ಬಲ ಮನಸ್ಸು. ಮತ್ತೆ ಪಾಪಕಾರ್ಯಗಳನ್ನು ಮಾಡುವು ದಿಲ್ಲವೆಂದು ಪ್ರತಿಜ್ಞೆ ಮಾಡಲಾರ. ಗಂಗಾಸ್ನಾನದಿಂದ ಎಲ್ಲಾ ಪಾಪಗಳೂ ಹೋಗುವುದೇನೋ ನಿಜ; ಆದರೆ ಹೋದ ರೇನು? ಜನ ಹೇಳುತ್ತಾರೆ : ಪಾಪಗಳೆಲ್ಲಾ ಗಂಗಾತೀರದಲ್ಲಿ ರುವ ಮರಗಳ ಮೇಲೆ ಕುಳಿತಿರುತ್ತವೆ; ಗಂಗಾಸ್ನಾನ ಮಾಡಿ ಮನುಷ್ಯ ಹಿಂದಿರುಗಿ ದಡ ಹತ್ತಿದ ಎಂದೊಡನೆಯೇ, ಆತನ ಹಿಂದೆ ಪಾಪಗಳು ಮರಗಳಿಂದ ಹಾರಿ ಮತ್ತೆ ಆತನ ಹೆಗಲು ಹತ್ತಿಬಿಡುತ್ತವೆ.

✻ **ಶ್ರೀರಾಮಕೃಷ್ಣರು:** ಸಂಸಾರವನ್ನು ತ್ಯಜಿಸಿದ ಸಾಧು ಭಗವನ್ನಾಮವನ್ನು ಜಪಿಸಿಯೇ ಜಪಿಸುತ್ತಾನೆ. ಆಗ ಹಾಗೆ ಮಾಡಬೇಕಾದದ್ದೆ. ಆತನಿಗೆ ಬೇರೇನೂ ಕೆಲಸವೇ ಇಲ್ಲ. ಆತ ಭಗವಚ್ಚಿಂತನೆ ಮಾಡುತ್ತಿದ್ದರೆ ಅದು ಆಶ್ಚರ್ಯ ಕರವಾದ ವಿಷಯವೇನಲ್ಲ. ಆತ ಭಗವ ಚ್ಚಿಂತನೆ ಮಾಡದೆ ಇದ್ದ ಎಂದರೆ, ಭಗವ ನ್ನಾಮೋಚ್ಚಾರಣೆ ಮಾಡದೆ ಇದ್ದ ಎಂದರೆ, ಆಗ ಜನ ಆತನನ್ನು ನಿಂದಿಸುತ್ತಾರೆ.

ಆದರೆ ಸಂಸಾರಿ ಭಗವನ್ನಾಮಜಪ ಮಾಡಿ ದರೆ ಅದೀಗ ಒಂದು ದೊಡ್ಡ ವಿಷಯ. ಜನಕ ರಾಜನನ್ನು ನೆನೆದುಕೊಳ್ಳಿ. ಆತ ಎಂಥ ಸಾಹಸಿ! ಆತ ಎರಡು ಕತ್ತಿಗಳ ವರಸೆ ಮಾಡುತ್ತಿದ್ದ. ಒಂದು ಜ್ಞಾನದ್ದು, ಇನ್ನೊಂದು ಕರ್ಮದ್ದು. ಒಂದು ಕಡೆ ಪೂರ್ಣ ಬ್ರಹ್ಮಜ್ಞಾನಿಯಾಗಿದ್ದ. ಇನ್ನೊಂದು ಕಡೆ ಈ ಜಗತ್ತಿನ ಕೆಲಸಕಾರ್ಯಗಳನ್ನೂ ಮಾಡುತ್ತಿದ್ದ.

✻ **ಭಕ್ತ :** ಭಗವಂತನನ್ನು ಪ್ರೀತಿಸಲಾಗುತ್ತಿಲ್ಲವಲ್ಲ , ಏನು ಮಾಡಲಿ?

**ಶ್ರೀರಾಮಕೃಷ್ಣರು :** ಆತನ ನಾಮದಲ್ಲಿ ಅಭಿರುಚಿ ಉಂಟಾಗುವಂತೆ ವ್ಯಾಕುಲನಾಗಿ ಆತನಿಗೆ ಪ್ರಾರ್ಥನೆಮಾಡು. ಆತ ಸಕಲಾಭೀಷ್ಟದಾಯಕ. ನಿಶ್ಚಯವಾಗಿಯೂ ಪೂರ್ಣ ಮಾಡಿಕೊಡುತ್ತಾನೆ.

✻ ವಿಷಮಶೀತ ಜ್ವರದ ರೋಗಿಗೆ ಆಹಾರದಲ್ಲಿ ರುಚಿಯೇ ಇಲ್ಲದೆ ಹೋಯಿತು ಎಂದರೆ ಆತ ಬದುಕು ವಂತೆಯೇ ಇಲ್ಲ ; ಆದರೆ ಲೇಶಮಾತ್ರವಾದರೂ ರುಚಿ ಇದ್ದದ್ದೇ ಆದರೆ ಅವನ ಸಂಬಂಧವಾಗಿ ಆಸೆಯನ್ನು ಬಿಟ್ಟು ಬಿಡಬೇಕಾಗಿಲ್ಲ. ಆದ್ದರಿಂದ ಆತನ ನಾಮದಲ್ಲಿ ರುಚಿ ಬೆಳೆಸಿ ಕೊಳ್ಳಬೇಕು. ಭಗವನ್ನಾಮವನ್ನು ಜಪಿಸಬೇಕು – ದುರ್ಗಾ ನಾಮವೋ, ಕೃಷ್ಣನಾಮವೋ, ಶಿವನಾಮವೋ ಯಾವುದಾ ದರೂ ಸರಿಯೆ. ನಾಮಜಪ ಮಾಡುತ್ತ ಮಾಡುತ್ತ ದಿನ ದಿನಕ್ಕೂ ಅನುರಾಗ ವೃದ್ಧಿಯಾಗುತ್ತಾ ಬರುತ್ತಿದ್ದರೆ, ಆನಂದ ದೊರಕುತ್ತಿದ್ದರೆ, ಇನ್ನು ಹೆದರಿಕೊಳ್ಳಬೇಕಾದ್ದೇನಿಲ್ಲ. ವಿಷಮ ಶೀತಜ್ವರ ಗುಣವಾಗಿಯೇ ಆಗುತ್ತದೆ ; ಭಗವಂತನ ಕೃಪೆ ದೊರೆತೇ ದೊರೆಯುತ್ತದೆ.

✻ ಭಗವಂತನ ನಾಮೋಚ್ಚಾರಣೆಯನ್ನು ಸರ್ವದಾ ಮಾಡುತ್ತಿರಬೇಕು. ಕಲಿಯುಗದಲ್ಲಿ ನಾಮಮಾಹಾತ್ಮ್ಯ. ಈ ಯುಗದಲ್ಲಿ ಅನ್ನಗತಪ್ರಾಣವಾದ್ದರಿಂದ ಯೋಗಾಭ್ಯಾಸ ಸಾಧ್ಯವಿಲ್ಲ.

'**ಶ್ರೀರಾಮಕೃಷ್ಣ ವಚನವೇದ**'ದಿಂದ